ಶ್ರೀ ಸಿ. ಭೈರೇಗೌಡ (ಕಂದಾಯ ಮಂತ್ರಿಗಳ ಪರವಾಗಿ) :- ಮಾನ್ಯ ಅಧ್ಯಕ್ಷರೇ, ಆ ಗ್ರಾಮಕ್ಕೆ ನೀರು ನುಗ್ಗಿ ಬಸಿ ನೀರಿನಿಂದ ಜೌಗು ಉಂಟಾಗಿ ಮನುಷ್ಯರು ವಾಸ ಮಾಡುವುದಕ್ಕೆ ತೊಂದರೆಯಾಗಿರತಕ್ಕಂಥಾದ್ದು ನಿಜ. ಈ ಗ್ರಾಮವನ್ನು ಬೇರೆ ಕಡೆ ಶಿಫ್ಟ್ ಮಾಡುವುದಕ್ಕೆ 1 ಕೋಟಿ 27 ಲಕ್ಷ ರೂಪಾಯಿಗಳು ವಿಚ್ರಾಗುವ ಕಾರಣದಿಂದ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಕಾರ್ಯಕ್ರಮ ಮಾಡಲು ಸರ್ಕಾರ ಪರಿಶೀಲಿಸಲಾಗುತ್ತದೆಂದು ಉತ್ತರದಲ್ಲಿಯೂ ಸಹಾ ತಿಳಿಸಲಾಗಿದೆ. ಪುನಃ ನಾನು ಹೇಳುವುದೇನೆಂದರೆ, ಆದಷ್ಟು ಜಾಗ್ರತೆ ಇದಕ್ಕೆ ಏನು ಮಾಡುವುದಕ್ಕೆ ಸಾಧ್ಯ ಇದೆಯೋ ಅದನ್ನು ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಆಶ್ವಾಸನೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ರಾಜಾ ವೆಂಕಟಪ್ಪ ನಾಯಕ್ :- ಮಾನ್ಯ ಅಧ್ಯಕ್ಷರೆ, ಇದಕ್ಕಾಗಿ ಅಲ್ಲಿನ ಗ್ರಾಮ ಸ್ಥರೇ ಬೇರೆ ಕಡೆ ಭೂಮಿಯನ್ನು ವಾಲಂಟರಿಯಾಗಿ ಕೊಡಲಿಕ್ಕೆ ತಯಾರಿದ್ದಾರೆ. ಅದಕ್ಕೋಸ್ಕರ ಆದಷ್ಟು ಬೇಗ ಇದನ್ನು ಮಾಡಬೇಕು. ಇನ್ನು ಎಷ್ಟು ದಿವಸದಲ್ಲಿ ಈ ಕೆಲಸವನ್ನು ಮುಗಿಸುತ್ತೀರೆಂದು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೇ, ಸಮಯ ನಿರ್ಧಾರ ಮಾಡುವುದು ಕಷ್ಟವಾಗುತ್ತದೆ. ಗ್ರಾಮಸ್ಥರು ಭೂಮಿ ಕೊಡಲಿಕ್ಕೆ ತಯಾರಿದ್ದಾರೆಂದು ಮಾನ್ಯ ಸದಸ್ಯರು ಹೇಳಿರುವುದರಿಂದ ಈ ವಿಷಯವನ್ನು ಪರಿಗಣಿಸಲಾಗುತ್ತದೆ.

ವಿಷಯ :- ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 314 (2202)

ಶ್ರೀ ಅಮರೇಗೌಡ ಪಾಟೀಲ ಬಯ್ಯಾಪುರ (ಲಿಂಗಸುಗೂರು) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆರೋಗ್ಯ ಇಲಾಖೆಯಲ್ಲಿರುವ ವೈದ್ಯಾಧಿಕಾರಿಗಳು ಮತ್ತು ನರ್ಸ್ (ಎ.ಎನ್.ಎಂ) ಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾ, ತಾಲ್ಲೂಕುವಾರು ಮಾಹಿತಿ ನೀಡುವುದು.)

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಈ) ವಿಭಾಗ ಮಟ್ಟದಲ್ಲಿಯೇ ಭರ್ತಿಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇಲ್ಲವಾದರೆ ಕಾರಣವೇನು?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ವೈದ್ಯಾಧಿಕಾರಿಗಳು - 4130

ಕಿರಿಯ ಆರೋಗ್ಯ ಸಹಾಯಕಿ - 9554

ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) ಮಾಹಿತಿ ಅನುಬಂಧಿಸಲಾಗಿದೆ.

ಇ) ಖಾಲಿ ಇರುವ ವೈದ್ಯರ ಹುದ್ದೆಯನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರನ್ನು ನೇಮಿಸುವ ಮೂಲಕ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸುವ ಮೂಲಕ, ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಪ್ರಯೋಗಾಲಯ ತಂತ್ರಜ್ಞರ ಕೆಲವು ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಆರ್ಥಿಕ ಇಲಾಖೆಯಿಂದ ವಿನಾಯಿತಿ ಪಡೆಯಲಾಗಿದ್ದು, ಈ ಸಂಬಂಧ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಈ ಬಗ್ಗೆ ಸ್ಪಷ್ಟೀಕರಣ ಕೋರಲಾಗಿದ್ದು ಈ ಸ್ಪಷ್ಟೀಕರಣವನ್ನು ನಿರೀಕ್ಷಿಸಲಾಗುತ್ತಿದೆ. ಈ ಮಾಹಿತಿ ಸ್ವೀಕರಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಗುತ್ತಿಗೆ ಆಧಾರದ ಮೇರೆಗೆ ವೈದ್ಯಾಧಿಕಾರಿಗಳ ಆಯ್ಕೆಯನ್ನು ಮತ್ತು ಎ.ಎನ್.ಎಂ. ಹುದ್ದೆಗಳನ್ನು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಲಾಗುತ್ತದೆ.

ವೈದ್ಯರು ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಮಂಜೂರಾಗಿರುವ ಹುದ್ದೆಗಳು.

(ಜಿಲ್ಲಾವಾರು)

ಕ್ರಮ ಸಂಖ್ಯೆ	ಜಿಲ್ಲೆಗಳು	ವೈದ್ಯರ ಹುದ್ದೆ ಮಂಜೂರು.	ಕಿರಿಯ ಮಹಿಳಾಆರೋಗ್ಯ ಸಹಾಯಕಿ ಹುದ್ದೆ ಮಂಜೂರು.
1)	ಬೆಂಗಳೂರು (ನಗರ)	---	237
2)	ಬೆಂಗಳೂರು (ಗ್ರಾಮಾಂತರ)	634	436
3)	ಕೋಲಾರ	222	550
4)	ತುಮಕೂರು	229	558
5)	ಶಿವಮೊಗ್ಗ	206	460
6)	ಚಿತ್ರದುರ್ಗ	274	526
7)	ಮೈಸೂರು	300	857
8)	ಮಂಡ್ಯ	155	428
9)	ದಕ್ಷಿಣ ಕನ್ನಡ	181	706
10)	ಕೊಡಗು	82	207
11)	ಹಾಸನ	186	473
12)	ಚಿಕ್ಕಮಗಳೂರು	142	375
13)	ಬೆಳಗಾಂ	194	623

ಕ್ರಮ ಸಂಖ್ಯೆ	ಜಿಲ್ಲೆಗಳು	ವೈದ್ಯರ ಹುದ್ದೆ ಮಂಜೂರು.	ಕಿರಿಯ ಮಹಿಳಾಆರೋಗ್ಯ ಸಹಾಯಕಿ ಹುದ್ದೆ ಮಂಜೂರು.
14)	ಬಿಜಾಪುರ	178	510
15)	ಧಾರವಾಡ	261	673
16)	ಉತ್ತರ ಕನ್ನಡ	116	379
17)	ಗುಲ್ಬರ್ಗಾ	259	493
18)	ರಾಯಚೂರು	165	394
19)	ಬೀದರ್	129	284
20)	ಬಳ್ಳಾರಿ	215	385
		4130	9,554

ವೈದ್ಯರು ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಖಾಲಿ ಹುದ್ದೆಗಳು
(ತಾಲ್ಲೂಕ್ ವಾರು)

ಬೆಂಗಳೂರು (ನಗರ) ಜಿಲ್ಲೆ	ವೈದ್ಯರು	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ
1) ಆನೇಕಲ್ ತಾಲ್ಲೂಕ್	-	1
2) ಬೆಂಗಳೂರು ದಕ್ಷಿಣ ತಾಲ್ಲೂಕ್	-	1
3) ಬೆಂಗಳೂರು ಉತ್ತರ ತಾಲ್ಲೂಕ್	-	2
4) ಬೆಂಗಳೂರು ಸಿಟಿ	2	-
	2	4
ಬೆಂಗಳೂರು ಗ್ರಾಮಾಂತರ ಜಿಲ್ಲೆ		
1) ಚನ್ನಪಟ್ಟಣ	-	8
2) ರಾಮನಗರ	2	1
3) ಮಾಗಡಿ	4	-
4) ಕನಕಪುರ	1	14
5) ದೊಡ್ಡಬಳ್ಳಾಪುರ	-	1
6) ದೇವನಹಳ್ಳಿ	1	-
7) ನೆಲಮಂಗಲ	-	-
8) ಹೊಸಕೋಟೆ	1	-
	9	24

	ವೈದ್ಯರು	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ
ಚಿತ್ರದುರ್ಗ ಜಿಲ್ಲೆ		
1) ಚಿತ್ರದುರ್ಗ	-	3
2) ಚಳ್ಳಕೆರೆ	4	1
3) ಮೊಳಕಾಲ್ಮೂರು	4	3
4) ಜಗಳೂರು	3	4
5) ಹಿರಿಯೂರು	3	2
6) ದಾವಣಗೆರೆ	1	3
7) ಹರಿಹರ	1	1
8) ಹೊಸದುರ್ಗ	1	6
9) ಹೊಳಲ್ಕೆರೆ	2	7
	19	30
ಶಿವಮೊಗ್ಗ ಜಿಲ್ಲೆ		
1) ಶಿವಮೊಗ್ಗ	5	-
2) ಭದ್ರಾವತಿ	-	1
3) ಚನ್ನಗಿರಿ	6	5
4) ಹೊನ್ನಾಳಿ	-	2
5) ಶಿಕಾರಿಪುರ	5	5
6) ಸೊರಬ	7	6
7) ಸಾಗರ	-	4
8) ಹೊಸನಗರ	5	3
9) ತೀರ್ಥಹಳ್ಳಿ	5	1
	33	27
ಕೋಲಾರ ಜಿಲ್ಲೆ		
1) ಕೋಲಾರ	8	1
2) ಮಾಲೂರು	-	-
3) ಬಂಗಾರಪೇಟೆ	1	-
4) ಮುಳಬಾಗಿಲು	1	1
5) ಶ್ರೀನಿವಾಸಪುರ	4	2
6) ಚಿಂತಾಮಣಿ	2	2
7) ಗುಂಡಿಬಂಡಾ	-	2
8) ಗೌರಿಬಿದನೂರು	3	10

9) ಶಿಡ್ಲಘಟ್ಟ	5	3
10) ಚಿಕ್ಕಬಳ್ಳಾಪುರ	1	5
11) ಬಾಗೇಪಲ್ಲಿ	3	8
	28	34

ತುಮಕೂರು ಜಿಲ್ಲೆ

1) ತುಮಕೂರು	3	5
2) ತಿಪಟೂರು	2	2
3) ತುರುವೇಕೆರೆ	1	1
4) ಮಧುಗಿರಿ	5	6
5) ಕೊರಟಗೆರೆ	1	1
6) ಸಿರಾ	4	11
7) ಪಾವಗಡ	4	11
8) ಗುಬ್ಬಿ	1	6
9) ಚಿಕ್ಕನಾಯಕನಹಳ್ಳಿ	1	7
10) ಕುಣಿಗಲ್	4	10
	26	60

ಮೈಸೂರು ಜಿಲ್ಲೆ

1. ಮೈಸೂರು	2	-
2. ಟಿ. ನರಸಿಪುರ	-	-
3. ಕೊಳ್ಳೆಗಾಲ	3	12
4. ನಂಜನಗೂಡು	2	4
5. ಗುಂಡ್ಲುಪೇಟೆ	2	13
6. ಚಾಮರಾಜನಗರ	2	15
7. ಯಳಂದೂರು	2	4
8. ಹುಣಸೂರು	2	1
9. ಹೆಗ್ಗಡದೇವನ ಕೋಟೆ	2	9
10. ಕೃಷ್ಣರಾಜಸಾಗರ	-	8
11. ಪಿರಿಯಾಪಟ್ಟಣ	3	4
	20	68

ಚಿಕ್ಕಮಗಳೂರು ಜಿಲ್ಲೆ

1. ಚಿಕ್ಕಮಗಳೂರು	8	6
2. ಮೂಡಿಗೆರೆ	2	13
3. ಶೃಂಗೇರಿ	2	2
4. ಕೊಪ್ಪ	8	13
5. ನರಸಿಂಹರಾಜಪುರ	3	3
6. ತರೀಕೆರೆ	5	11
7. ಕಡೂರು	5	10
	33	58

ದಕ್ಷಿಣ ಕನ್ನಡ

1. ಮಂಗಳೂರು	6	2
2. ಉಡುಪಿ	5	13
3. ಕಾರ್ಕಳ	8	9
4. ಸುಳ್ಯ	4	-
5. ಬೆಳ್ತಂಗಡಿ	6	15
6. ಪುತ್ತೂರು	3	3
7. ಬಂಟ್ವಾಳ	6	13
8. ಕುಂದಾಪುರ	8	17
	46	72

ಕೊಡಗು

1. ಮಡಿಕೇರಿ	5	2
2. ವಿರಾಜಪೇಟೆ	5	-
3. ಸೋಮವಾರಪೇಟೆ	6	2
	16	4

ಮಂಡ್ಯ ಜಿಲ್ಲೆ

1) ಮಂಡ್ಯ	2	21
2) ಮದ್ದೂರು	-	14
3) ಮಳವಳ್ಳಿ	4	17
4) ಪಾಂಡವಪುರ	3	4
5) ಶ್ರೀರಂಗಪಟ್ಟಣ	5	7
6) ಕೆ. ಆರ್. ಪೇಟೆ	4	19
7) ನಾಗಮಂಗಲ	2	17
	20	99

	ವೈದ್ಯರು	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ
ಹಾಸನ ಜಿಲ್ಲೆ		
1) ಆಲೂರು	4	1
2) ಅರಕಲಗೂಡು	6	2
3) ಅರಸೀಕೆರೆ	7	11
4) ಚನ್ನರಾಯಪಟ್ಟಣ	6	18
5) ಬೇಲೂರು	3	5
6) ಸಕಲೇಶಪುರ	5	8
7) ಹೊಳೇನರಸೀಪುರ	4	4
8) ಹಾಸನ	4	3
	39	52
ಬೆಳಗಾಂ ಜಿಲ್ಲೆ		
1. ಬೆಳಗಾಂ	7	-
2. ಖಾನಾಪುರ	-	4
3. ಹುಕ್ಕೇರಿ	-	2
4. ಬೈಲಹೊಂಗಲ	-	4
5. ಸವದತ್ತಿ	3	9
6. ರಾಮದುರ್ಗ	3	9
7. ಗೋಕಾಕ	3	6
8. ಚಿಕ್ಕೋಡಿ	-	6
9. ಅಥಣಿ	6	14
10. ರಾಯಭಾಗ್	4	12
	26	66
ಬಿಜಾಪುರ ಜಿಲ್ಲೆ		
1. ಬಿಜಾಪುರ ಜಿಲ್ಲೆ	7	2
2. ಬಸವನ ಬಾಗೇವಾಡಿ	1	5
3. ಮುದ್ದೇಬಿಹಾಳ್	3	9
4. ಜಮಖಂಡಿ	2	1
5. ಮುಧೋಳ	2	-
6. ಬೀಳಗಿ	1	-
7. ಇಂಡಿ	2	7
8. ಸಿಂಧಗಿ	3	13

9. ಬಾಗಲಕೋಟೆ	3	-
10. ಬಾದಾಮಿ	2	5
11. ಹುನಗುಂದ	3	4
	29	46

ಉತ್ತರ ಕನ್ನಡ ಜಿಲ್ಲೆ

1. ಕಾರವಾರ ಜಿಲ್ಲೆ	1	-
2. ಅಂಕೋಲ	3	-
3. ಕುಮಟಾ	6	-
4. ಬಂಟ್ವಾಳ	1	-
5. ಸಿದ್ದಾಪುರ	2	-
6. ಸಿರ್ಸಿ	5	-
7. ಮುಂಡಗೋಡು	1	-
8. ಯಲ್ಲಾಪುರ	5	-
9. ಹಳಿಯಾಳ	6	-
10. ಜೋಯಿಡಾ	5	-
	35	-

Dharwad District	Doctors	ANMs
1. Dharwad	9	-
2. Hubli	2	-
3. Kalghatagi	-	-
4. Navalgund	1	-
5. Nargund	-	-
6. Gadag	-	-
7. Mundargi	3	3
8. Ron	-	3
9. Shigoan	-	1
10. Savanur	2	2
11. Shirahatti	-	-
12. Kundagol	-	-
13. Hangal	2	4
14. Hirekerur	2	4
15. Byadagi	2	2
16. Ranibennur	-	1
17. Haveri	1	3
	24	21

	Doctors	ANMs
Gulbarga		
1. Gulbarga	8	-
2. Alland	5	13
3. Afjalpur	4	8
4. Jevargi	5	15
5. Sedam	6	4
6. Chincholi	5	7
7. Chithapur	7	14
8. Yadgir	4	12
9. Shahapur	4	14
10. Shorapur	3	20
	51	107
Bellary		
1. Bellary	9	2
2. Siraguppa	5	6
3. Sandur	3	5
4. Hospet	1	1
5. Kudlagi	8	19
6. Harapanahally	5	12
7. Hagaribommanahally	2	3
8. Hadagali	3	17
	36	66

	ವೈದ್ಯರು	ಕಿರಿಯ ಆರೋಗ್ಯ ಸಹಾಯಕಿ
ಬೀದರ್ ಜಿಲ್ಲೆ		
1) ಬೀದರ್	2	-
2) ಔರಾದ್	2	-
3) ಭಾಲ್ಕಿ	-	1
4) ಹುಮ್ನಾಬಾದ್	2	2
5) ಬಸವಕಲ್ಯಾಣ	3	9
	9	12

	ವೈದ್ಯರು	ಕಿರಿಯ ಆರೋಗ್ಯ ಸಹಾಯಕಿ
ರಾಯಚೂರು ಜಿಲ್ಲೆ		
1) ರಾಯಚೂರು	7	5
2) ಮಾನ್ವಿ	3	13
3) ದೇವದುರ್ಗ	5	14
4) ಲಿಂಗಸೂಗೂರು	3	11
5) ಸಿಂಧನೂರು	5	19
6) ಕುಷ್ಟಗಿ	4	14
7) ಕೊಪ್ಪಳ	7	8
8) ಗಂಗಾವತಿ	2	15
9) ಯಲಬುರ್ಗ	4	7
	40	106

ಬೋಧಕ ಆಸ್ಪತ್ರೆಗಳಲ್ಲಿ ವೈದ್ಯರ 21 ಹುದ್ದೆಗಳು ಖಾಲಿ ಇರುತ್ತವೆ.

ಶ್ರೀ ಅಮರಗೌಡ ಪಾಟೀಲ :- ಮಾನ್ಯ ಅಧ್ಯಕ್ಷರೇ, ಸರ್ಕಾರ ಒದಗಿಸಿರುವ ಉತ್ತರ ಬಹಳಷ್ಟು ಸರಿಯಾಗಿದೆ. ಈ ಹಿಂದೆ ಮಾನ್ಯ ಸಚಿವರು ಉತ್ತರ ಕೊಡುವಾಗ ಗ್ರಾಮೀಣ ಪ್ರದೇಶಗಳ ವೈದ್ಯಕೀಯ ಕೇಂದ್ರಗಳಲ್ಲಿ ಅನೇಕ ವೈದ್ಯರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದಾಗ, ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸತಕ್ಕಂಥ ವೈದ್ಯರುಗಳಿಗೆ ವಿಶೇಷ ಭತ್ಯೆ ಮತ್ತು ಅನುದಾನವನ್ನು ಕೊಟ್ಟು ಉತ್ತೇಜಿಸಿದರೆ ವೈದ್ಯರುಗಳು ಸಂತೋಷವಾಗಿ ಕಾರ್ಯ ನಿರ್ವಹಿಸಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಸಲಹೆ ಮಾಡಿದ್ದೆ. ಆದರೆ, ಅದರ ಬಗ್ಗೆ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಡಾ. ಹೆಚ್. ಸಿ. ಮಹದೇವಪ್ಪ :- ಸಭಾಧ್ಯಕ್ಷರೇ, ರಾಜ್ಯದಲ್ಲಿರತಕ್ಕಂಥ ಎಲ್ಲಾ ವೈದ್ಯರ ಖಾಲಿ ಹುದ್ದೆಗಳನ್ನು ತುಂಬುವ ವಿಚಾರಕ್ಕೆ ಸಂಬಂಧಪಟ್ಟಂತೆ ನಿನ್ನೆ ದಿವಸ ಸನ್ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಸುಮಾರು 4 ಸಾವಿರಕ್ಕೂ ಹೆಚ್ಚು ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ತನ್ನ ಅನುಮತಿಯನ್ನು ಕೊಟ್ಟಿದೆ. ಹೀಗಾಗಿ ಖಾಲಿ ಇರತಕ್ಕಂಥ ವೈದ್ಯರ ಹುದ್ದೆಗಳನ್ನು ತುಂಬಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಅಮರಗೌಡ ಪಾಟೀಲ :- ಮಾನ್ಯ ಅಧ್ಯಕ್ಷರೇ, ರಾಜ್ಯದ ಬಹಳ ಆಸ್ಪತ್ರೆಗಳಲ್ಲಿ ಎ.ಎನ್.ಎಂ., ಗಳ ಹುದ್ದೆಗಳೂ ಸಹಾ ಖಾಲಿ ಇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂಬುದನ್ನೂ ತಿಳಿಸಬೇಕು.

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತದೆಂದು ತಮ್ಮ ಮೂಲಕ ತಿಳಿಸಬಯಸುತ್ತೇನೆ.